









## ನಿಂತೊಂದಾನೆಯೂ, ಓಡದ ಕುದುರೆಯೂ

ಇದು, ಆನೆ ಬಂತೊಂದಾನೆ ಅಲ್ಲ. ನಿಂತಲ್ಲೇ ಇದ್ದು ಕದಲದೆ ಇರುವ ಆನೆ. ಬಿದ್ದ ಮರದ ಕೊಂಬೆಯೇ ಸೊಂಡಿಲು, ಬೇರುಗಳೇ ದಂತ, ಅಡಿಕೆ ಹಾಳೆಯೇ ಕಿವಿ, ಒಣ ತೆಂಗಿನ ಮರದ (ಗರಿ) ಹ್ಯಾಡವೇ ಕಾಲುಗಳು, ಬಳ್ಳಿಯೇ ಬೃಹತ್ ದೇಹ, ಹಣೆಗೆ ಮೆತ್ತಿದ ಮಣ್ಣು. ಅಂತೂ ಅನುಪಯುಕ್ತ ನಿರ್ಜೀವ ವಸ್ತುಗಳನ್ನು ಉಪಯೋಗಿಸಿ ಕಲೆಗೆ ಜೀವ ತುಂಬಿದ್ದಾರೆ ಕಲಾವಿದರು. ಈ ಆನೆ ಸಾಕುವುದು ಭಾರೀ ಸಲೀಸು.

ಕುದುರೆ ಕತೆಯೂ ಆನೆಯಂತೆಯೇ. ಒಣ ಮರದ ಚಿಕ್ಕ ಚಿಕ್ಕ ಕಟ್ಟಿಗೆ ಕೋಲುಗಳಿಂದ ಕಾಲುಗಳು ಹಾಗೂ ದೇಹವನ್ನು ರಚಿಸಲಾಗಿದೆ. ಒಣ ಅಡಿಕೆ ಹಾಳೆಯ ಗರಿಯಿಂದ ಬಾಲ, ಭುಜ ತಯಾರಾಗಿದೆ. ಓಡದ ಈ ಕುದುರೆ ಹಾಗೂ ಆನೆಯನ್ನು ನೋಡಲು ಹೆಗ್ಗೋಡಿನ ನೀನಾಸಂಗೆ ಭೇಟಿ ಕೊಟ್ಟರೆ ಸಾಕು. ನೀನಾಸಂನ ಆವರಣದಲ್ಲಿ ಇಂತಹ ಹಲವಾರು ಆಕೃತಿಗಳು ಮನ ಸೆಳೆತ್ತಿವೆ.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಜೀವಕಳೆ ತುಳುಕುವ ರಾಕ್ ಗಾರ್ಡನ್

ಶಿಲ್ಪಕಲೆ, ಚಿತ್ರಕಲೆ ಬಹಳ ಸೂಕ್ಷ್ಮವಾದದ್ದು. ಇದಕ್ಕೆ ವಂಶ ಪಾರಂಪರ್ಯದ ಹಿನ್ನೆಲೆಯ ಜೊತೆಗೆ ತಾಳ್ಮೆ, ಏಕಾಗ್ರತೆ, ಕ್ರಿಯಾಶೀಲತೆ, ತಲ್ಲೀನತೆಯೂ ಮುಖ್ಯ. ಕ್ರಿಯಾಶೀಲತೆಯನ್ನು ಪ್ರಧಾನವಾಗಿಸಿಟ್ಟುಕೊಂಡ ಕಲಾವಿದರೊಬ್ಬರು ಕಾರವಾರದ ಸಮುದ್ರ ತೀರದಲ್ಲಿರುವ 'ರಾಕ್ ಗಾರ್ಡನ್'ನಲ್ಲಿ ಶಿಲ್ಪ ಕಲಾಕೃತಿಗಳನ್ನು ರಚಿಸಿ ಅವುಗಳಿಗೆ ಜೀವತುಂಬಿದ್ದಾರೆ.

ಸಿದ್ದಿ, ಕುಡುಮಿ, ಗೊರವ ಜನಾಂಗದವರ ಜೀವನಶೈಲಿ, ಉಡುಗೆ ತೊಡುಗೆಗಳನ್ನು ತಮ್ಮ ಕಲಾಕೃತಿಯಲ್ಲಿ ಪ್ರತಿಬಿಂಬಿಸಿದ್ದಾರೆ ಕಲಾವಿದ. ಒಂದೊಂದು ಶಿಲ್ಪದ ಕೆತ್ತನೆಗಳು ಅವರ ಕಲಾಕೌಶಲವನ್ನು ಎತ್ತಿ ಹಿಡಿಯುತ್ತಿವೆ. ನಿಂತಿರುವ ವೃದ್ಧ ಮಹಿಳೆ, ತೋಟದಲ್ಲಿ ಕೆಲಸ ಮಾಡುತ್ತಿರುವ ಮಾಲಿಯ ವೇಷ ಭೂಷಣಗಳು, ಮಹಿಳೆಯ ಮುಖದ ಮೇಲೆ ಮೂಡಿರುವ ನೆರಿಗೆಗಳು ವೃದ್ಧಾಪ್ಯದ ಸಹಜತೆಯ ಪ್ರತೀಕವಾಗಿವೆ. ವೃದ್ಧೆ ಧರಿಸಿರುವ ಮಣಿಸರಗಳು, ವಿಭಿನ್ನವಾಗಿ ಉಟ್ಟಿರುವ ಸೀರೆ ಇವೆಲ್ಲವೂ ಅವರ ಜೀವನವನ್ನು ಪ್ರತಿನಿಧಿಸುತ್ತಿವೆ. ಈ ಶಿಲ್ಪಗಳು ನೈಜ ವ್ಯಕ್ತಿಗಳೆಂಬ ಭ್ರಮೆ ಮೂಡಿಸುವಂತಿವೆ. ಶಿಲ್ಪಿಯ ಕೈಚಳಕಕ್ಕೆ ಮನಸೋಲದವರಿಲ್ಲ. ಒಮ್ಮೆ ನೋಡಲೇಬೇಕಾದ ಆಕರ್ಷಕ ತಾಣ ಇದು.

–ಮನೋಜ್ ಕುಮಾರ್ ಕೆ., ಬೆಂಗಳೂರು



